| | | | |
|---|---|---|---|
| | | ರೂ.1.00ಲಕ್ಷದಿಂದ 5.00ಲಕ್ಷಗಳವರೆಗೆ ಪಡೆಯಬಹುದಾಗಿದ್ದು, ಅದರಂತೆ ಸಬ್ಸಿಡಿಯನ್ನೂ ಸಹ ರೂ.1.00ಲಕ್ಷಗಳವರೆಗೆ ನೀಡಲಾಗುತ್ತದೆ. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆದಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸೌಲಭ್ಯ ಒದಗಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಚೆಸ್ಕಾಂ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ ರಿಕನ್ಸಿಲ್ ಮಾಡಿಕೊಳ್ಳಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಯವರು ವಿವರ ನೀಡಿದರು.<br>ಮುಂದುವರೆದು, ಪರಿಶಿಷ್ಟ ಜಾತಿಯ ಮಕ್ಕಳಿಗೆ ಉನ್ನತ ವ್ಯಾಸಂಗ ಮಾಡಲು ವಿದ್ಯಾಭ್ಯಾಸ ಸಾಲವನ್ನು ಎನ್.ಎಸ್.ಎಫ್.ಡಿ.ಸಿ ವತಿಯಿಂದ ನೀಡಲಾಗುವುದು, ಇದಕ್ಕಾಗಿ ಪರಿಶಿಷ್ಟ ಜಾತಿಯ ಮಕ್ಕಳು ಇಂಜಿನಿಯರಿಂಗ್/ ಎಂ.ಬಿ.ಬಿ.ಎಸ್ ಮತ್ತು ಇತರೆ ಉನ್ನತ ವ್ಯಾಸಂಗ ಮಾಡುತ್ತಿರುವ ಮಕ್ಕಳಿಂದ ಅರ್ಜಿಯನ್ನು ಆಹ್ವಾನಿಸಿ ಕಳುಹಿಸುವಂತೆ ತಿಳಿಸಿರುತ್ತಾರೆ. ಸದರಿ ವಿದ್ಯಾರ್ಥಿಗಳ ತಂದೆ ಅಥವಾ ತಾಯಿ ಸರ್ಕಾರಿ ನೌಕರಿಯಲ್ಲಿರಬಾರದು ಎಂಬ ಷರತ್ತನ್ನು ವಿಧಿಸಿರುತ್ತಾರೆಂದು ತಿಳಿಸಿದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಕರ್ನಾಟಕ ಮೂಲ ಸೌಕರ್ಯಗಳ ಇಲಾಖೆಯ ವತಿಯಿಂದ ಕಟ್ಟಡ ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಅನೇಕ ಕಟ್ಟಡಗಳಲ್ಲಿ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ. ಈ ಬಗ್ಗೆ ಗಮನಹರಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂಧಪಟ್ಟ ಇಲಾಖೆಯ ವಶಕ್ಕೆ ನೀಡಬೇಕೆಂದು ತಿಳಿಸಿದರು.<br>ಉಪ ನಿರ್ದೇಶಕರು, ಕರ್ನಾಟಕ ಮೂಲ ಸೌಕರ್ಯಗಳ ಇಲಾಖೆರವರು ಮಾತನಾಡುತ್ತಾ, ಕಾಮಗಾರಿಗಳಿಗೆ ಹೆಚ್ಚುವರಿ ಅನುದಾನದ ಅವಶ್ಯಕತೆಯಿದ್ದು, ಕೇಂದ್ರ ಕಛೇರಿಗೆ ಈ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಹೊಸದಾಗಿ ವ್ಯವಸ್ಥಾಪಕ ನಿರ್ದೇಶಕರು ಬಂದಿದ್ದು, ಅವರೊಂದಿಗೆ ಚರ್ಚಿಸಿ ಕ್ರಮ ವಹಿಸುವುದಾಗಿ ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಪಾರ್ವತಮ್ಮರವರು ಮಾತನಾಡುತ್ತಾ, ಕಲ್ಲುಸಾದರಹಳ್ಳಿ ವಿದ್ಯಾರ್ಥಿನಿಲಯಕ್ಕೆ ಹೋಗಲು ರಸ್ತೆಯಿರುವುದಿಲ್ಲ. ರಸ್ತೆಗೆ ಜಾಗವನ್ನು ಬಿಡಲು ಈ ಹಿಂದೆ ಒಪ್ಪಿಕೊಂಡಿದ್ದವರು ಈಗ ಜಾಗವನ್ನು ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ. ವಿದ್ಯಾರ್ಥಿನಿಲಯಕ್ಕೆ ರಸ್ತೆ ಅಗತ್ಯ ಅತ್ಯವಶ್ಯವಾಗಿದ್ದು, ರಸ್ತೆಗೆ ಜಾಗವನ್ನು ಬಿಟ್ಟುಕೊಡುವ ಬಗ್ಗೆ ಜಮೀನಿನ ಮಾಲೀಕರೊಂದಿಗೆ ಚರ್ಚೆ ನಡೆಸಿ ಕ್ರಮ ವಹಿಸಬೇಕೆಂದು ಕೋರಿದರು. | |
| | ಮತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | | |

(ಎಂ.ಕೆ.ದೇವಪ್ಪ ಮಲ್ಲಿಗೆವಾಳು)
ಅಧ್ಯಕ್ಷರು,
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ

ಮಾನ್ಯ ಸದಸ್ಯರಾದ ಶ್ರೀಮತಿ ಪಾರ್ವತಮ್ಮರವರು ಮಾತನಾಡುತ್ತಾ, ಬೇಲೂರಿನಲ್ಲಿ ನಡೆಯುತ್ತಿರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಕಳಪೆ ಗುಣಮಟ್ಟದ ತರಕಾರಿ/ ಬೇಳೆ ಕಾಳುಗಳನ್ನು ಮಕ್ಕಳಿಗೆ ನೀಡುತ್ತಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕೆಂದು ಕೋರಿದರು.

ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆರವರು ಮಾತನಾಡುತ್ತಾ, ದಿಡಗ ವಿದ್ಯಾರ್ಥಿನಿಲಯದಲ್ಲಿ ನೀರಿನ ಸಮಸ್ಯೆ ಬಹಳ ಇದೆ. ಗ್ರಾಮ ಪಂಚಾಯಿತಿಯಿಂದ ನೀರಿನ ಸೌಲಭ್ಯವನ್ನು ಪಡೆಯಲಾಗಿತ್ತು. ಆದರೆ, ಈಗ ಗ್ರಾಮದಲ್ಲಿಯೇ ನೀರಿನ ಸಮಸ್ಯೆ ತೀವ್ರವಾಗಿದೆ. ಆದ್ದರಿಂದ ನೀರನ್ನು ದೂರದಿಂದ ತರಬೇಕಾಗಿರುತ್ತದೆ. ಹಾಸನ ನಗರದ ವಿದ್ಯಾರ್ಥಿನಿಲಯಗಳಲ್ಲೂ ಸಹ ನೀರಿನ ಸಮಸ್ಯೆ ಬಹಳವಾಗಿದ್ದು, ನಗರಸಭೆಯವರಿಗೆ ನೀರನ್ನು ಸರಬರಾಜು ಮಾಡುವಂತೆ ಕೋರಲಾಗಿದೆ ಎಂದು ವಿವರ ನೀಡಿದರು.

ಮುಂದುವರೆದು, ಹಾಸನ ನಗರದ ಬಾಲಕರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ದುರಸ್ಥಿಗೆ ಹೆಚ್ಚಿನ ಅನುದಾನದ ಅವಶ್ಯಕತೆಯಿದ್ದು, ರಾಜ್ಯವಲಯದಿಂದ ರೂ.10.00ಲಕ್ಷಗಳನ್ನು ನೀಡಲಾಗಿದೆ. ಅದೇ ರೀತಿಯಲ್ಲಿ ಪ್ರಸಕ್ತ ಸಾಲಿನ ಕಟ್ಟಡಗಳ ದುರಸ್ಥಿ ಯೋಜನೆಯಡಿ ರೂ.10.00ಲಕ್ಷಗಳನ್ನು ಸದರಿ ವಿದ್ಯಾರ್ಥಿನಿಲಯದ ದುರಸ್ಥಿಗೆ ನಿಗದಿಪಡಿಸಲಾಗಿದೆ. ದುರಸ್ಥಿ ಕಾಮಗಾರಿಯನ್ನು ಕರ್ನಾಟಕ ಮೂಲ ಸೌಕರ್ಯಗಳ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಜಿಲ್ಲಾ ಪಂಚಾಯಿತಿಯಿಂದ ರೂ.10.00ಲಕ್ಷಗಳ ಅನುದಾನವನ್ನು ಕರ್ನಾಟಕ ಮೂಲ ಸೌಕರ್ಯಗಳ ಇಲಾಖೆಗೆ ನೀಡಲು ಕ್ರಮ ವಹಿಸಬೇಕೆಂದು ಕೋರಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಮಾತನಾಡುತ್ತಾ, ಅಂಗನವಾಡಿ ಕೇಂದ್ರಗಳಲ್ಲಿ ರೂ.8000.00ಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಲು ಯಾರೂ ಮುಂದೆ ಬರುತ್ತಿಲ್ಲವೆಂದು ತಿಳಿಸಿದರು.

ಮುಂದುವರೆದು, ಎಸ್.ಆರ್. ದರ ಹೆಚ್ಚಾಗಿರುತ್ತದೆ. ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ರೂ.3.60ಲಕ್ಷಗಳ ಘಟಕ ವೆಚ್ಚ ಕಡಿಮೆಯಾಗಿದ್ದು, ನಿರ್ಮಾಣ ಮಾಡಲು ಸಾಧ್ಯವಿಲ್ಲವೆಂದು ಕರ್ನಾಟಕ ಮೂಲ ಸೌಕರ್ಯಗಳ ಇಲಾಖೆರವರು ತಿಳಿಸಿರುತ್ತಾರೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಸಭೆಗೆ ವಿವರ ನೀಡಿದರು. ಮಾನ್ಯ ನ್ಯಾಯಮೂರ್ತಿ ಪಾಟೀಲ್ ಅಧ್ಯಕ್ಷತೆಯ ಸಮಿತಿಯ ವರದಿಯಲ್ಲಿ ಪ್ರತಿ ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ರೂ.10.00ಲಕ್ಷಗಳ ಅನುದಾನವನ್ನು ಶಿಫಾರಸ್ಸು ಮಾಡಿದ್ದು, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಅದು ಅನುಷ್ಠಾನಕ್ಕೆ ಬಂದಲ್ಲಿ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಅವಕಾಶವಿದ್ದು, ಸದರಿ ಅನುದಾನವನ್ನೂ ಸಹ ಬಳಸಿಕೊಂಡು ಶೌಚಾಲಯಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ತಿಳಿಸಿದರು.

2012–13ನೇ ಸಾಲಿನಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಡಿ ಅನುಷ್ಠಾನಗೊಳಿಸಲಾಗುವ ವಿವಿಧ ಯೋಜನೆಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ಸಿಕ್ಕಿರುತ್ತದೆ. ಪ್ರಸಕ್ತ ಸಾಲಿನಿಂದ ಮೈಕ್ರೋ ಸಾಲವನ್ನು

# ದಿನಾಂಕ: 20-11-2012ರಂದು ಅಪರಾಹ್ನ: 2-30 ಗಂಟೆಗೆ ಹೇಮಾವತಿ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀ ಎಂ.ಕೆ.ದೇವಪ್ಪ ಮಲ್ಲಿಗೆವಾಳು
ಅಧ್ಯಕ್ಷರು,
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ.

ಹಾಜರಿ : 05 — ಗೈರು ಹಾಜರಿ:02

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | ಉಪ ಕಾರ್ಯದರ್ಶಿ(ಆಡಳಿತ) ರವರು ಸಭೆಗೆ ಹಾಜರಿದ್ದ ಮಾನ್ಯ ಅಧ್ಯಕ್ಷರು, ಸಮಿತಿ ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. | | |
| 1 | ಇಲಾಖಾ ಕಾರ್ಯಕ್ರಮಗಳ ಪ್ರಗತಿ ಬಗ್ಗೆ. | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಹಾಸನ ಇವರು ಮಾತನಾಡುತ್ತಾ, ವಿದ್ಯಾರ್ಥಿನಿಲಯಗಳಿಗೆ ಆಹಾರ ಸರಬರಾಜಿಗೆ ಸಂಬಂಧಿಸಿದಂತೆ, ಪ್ರಸ್ತುತ ಸಾಲಿನಲ್ಲಿ ಆಹಾರ ಸಾಮಗ್ರಿಗಳಿಗಾಗಿ ಜಿಲ್ಲಾ ವಲಯದಲ್ಲಿ ಟೆಂಡರ್ ಕರೆದಿಲ್ಲ. ರಾಜ್ಯಮಟ್ಟದಲ್ಲಿಯೇ ಕರೆದಿರುತ್ತಾರೆ. ರಾಜ್ಯ ಮಟ್ಟದಲ್ಲಿ ಆಯ್ಕೆಯಾಗುವ ಟೆಂಡರ್‌ದಾರರು ಜಿಲ್ಲೆಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿದ್ದನ್ನು ಗೋಡೌನ್‌ನಲ್ಲಿ ಸಂಗ್ರಹಿಸಿಟ್ಟು ವಿದ್ಯಾರ್ಥಿನಿಲಯಗಳಿಗೆ ವಿತರಣೆ ಮಾಡಬೇಕಾಗಿರುತ್ತದೆ. ಆದರೆ, ರಾಜ್ಯವಲಯಲದಲ್ಲಿ ಟೆಂಡರ್ ಅಂತಿಮವಾಗಿರುವುದಿಲ್ಲ. ಆದ್ದರಿಂದ, ಕೇಂದ್ರ ಕಛೇರಿಯಿಂದ ಒಂದು ಪತ್ರವನ್ನು ಬರೆದು ಪ್ರಸ್ತುತ ಸಾಲಿನ ಟೆಂಡರ್ ಅಂತಿಮವಾಗುವವರೆಗೆ ಹಿಂದಿನ ಟೆಂಡರ್‌ದಾರರಿಂದಲೇ ಆಹಾರ ಸಾಮಗ್ರಿಗಳನ್ನು ಪಡೆದು ವಿದ್ಯಾರ್ಥಿನಿಲಯಗಳಿಗೆ ನೀಡಲು ಕ್ರಮ ವಹಿಸುವಂತೆ ತಿಳಿಸಿರುತ್ತಾರೆ. ಆದರೆ, ಈಗ ಸರಬರಾಜು ಮಾಡುತ್ತಿರುವ ಸರಬರಾಜುದಾರರು ಆಹಾರ ಸಾಮಗ್ರಿಗಳ ಬೆಲೆ ತುಂಬಾ ಹೆಚ್ಚಾಗಿದ್ದು, 2011ರಲ್ಲಿ ನಿಗದಿಪಡಿಸಿದ ದರಕ್ಕೆ ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ಮಾರುಕಟ್ಟೆಯಲ್ಲಿ ದರ ಹೆಚ್ಚಾಗಿರುವ ಅವಶ್ಯ ಸಾಮಗ್ರಿಗಳ ದರಪಟ್ಟಿಯನ್ನು ಎ.ಪಿ.ಎಂ.ಸಿ ಯಿಂದ ಪಡೆದು ಅದರನ್ವಯ ತಾತ್ಕಾಲಿಕವಾಗಿ ಅಂದರೆ ರಾಜ್ಯವಲಯದಲ್ಲಿ ಟೆಂಡರ್ ಅಂತಿಮಗೊಳ್ಳುವವರೆಗೆ ದರವನ್ನು ಪರಿಷ್ಕರಿಸಿ ಆಹಾರ ಸಾಮಗ್ರಿಗಳನ್ನು ಸಮಾಜ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡುವಂತೆ ಹಿಂದಿನ ಟೆಂಡರ್‌ದಾರರಿಗೆ ತಿಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br>ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಚನ್ನರಾಯಪಟ್ಟಣ ತಾಲ್ಲೂಕು ದಿಡಗ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದಲ್ಲಿ ಮೂಲಭೂತ ಸೌಕರ್ಯಗಳಿರುವುದಿಲ್ಲವೆಂದು ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕೆಂದು ತಿಳಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲೆಯಲ್ಲಿ ನಡೆಯುತ್ತಿರುವ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡುತ್ತಿರುವ ಆಹಾರ ಸಾಮಗ್ರಿಗಳಲ್ಲಿ ಅತಿ ಹೆಚ್ಚು ಬೆಲೆ ವ್ಯತ್ಯಾಸವಾಗಿರುವ ಆಹಾರ ಸಾಮಗ್ರಿಗಳ ದರಪಟ್ಟಿಯನ್ನು ಎ.ಪಿ.ಎಂ.ಸಿಯಿಂದ ಪಡೆದು ಅದರನ್ವಯ ರಾಜ್ಯವಲಯದಲ್ಲಿ ಟೆಂಡರ್ ಅಂತಿಮಗೊಳ್ಳುವವರೆಗೆ ದರಗಳನ್ನು ಪರಿಷ್ಕರಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಮತ್ತು ಅದರಂತೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವಂತೆ ಹಿಂದಿನ ಟೆಂಡರ್‌ದಾರರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

6. ಶ್ರೀಮತಿ ವಸಂತ, ಸದಸ್ಯರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
7. ಶ್ರೀ ಎ.ಬಿ.ನಂಜುಂಡೇಗೌಡ, ಸದಸ್ಯರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
8. ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ ಮಾಹಿತಿಗಾಗಿ
9. ಮಾನ್ಯ ಉಪಾಧ್ಯಕ್ಷರು, ಜಿಲ್ಲಾ ಪಂಚಾಯಿತಿ ಇವರ ಆಪ್ತಶಾಖೆಗೆ ಮಾಹಿತಿಗಾಗಿ
10. ಜಿಲ್ಲಾ ಪಂಚಾಯಿತಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಹಿತಿಗಾಗಿ
11. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ
12. ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯಿತಿ, ಹಾಸನ.
13. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
14. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
15. ಮುಖ್ಯ ಯೋಜನಾಧಿಕರಿ, ಜಿಲ್ಲಾ ಪಂಚಾಯಿತಿ, ಹಾಸನ.
16. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ, ಹಾಸನ.
17. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಸನ.
18. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆ, ಹಾಸನ.
19. ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಹಾಸನ.
20. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
21. ಜಿಲ್ಲೆಯ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ ಮತ್ತು ಚನ್ನರಾಯಪಟ್ಟಣ
22. ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
23. ಉಪನಿರ್ದೇಶಕರು, ಮೂಲ ಸೌಕರ್ಯಗಳ ಇಲಾಖೆ, ಹಾಸನ.
24. ಕಚೇರಿ ಪ್ರತಿ.

# ಜಿಲ್ಲಾ ಪಂಚಾಯಿತ್ರಿ, ಹಾಸನ

## ಮುಂದೂಡಿದ ಸಭಾಹ್ವಾನ ಪತ್ರ

ದಿನಾಂಕ: 15-11-2012

ಎಂ.ಕೆ. ದೇವಪ್ಪ ಮಲ್ಲಿಗೆವಾಳು, ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತ್ರಿ, ಇವರ ಅಧ್ಯಕ್ಷತೆಯಲ್ಲಿ **ದಿ: 19-11-2012ರಂದು ಸೋಮವಾರ ಬೆಳಿಗ್ಗೆ 11-00 ಗಂಟೆಗೆ** ಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತ್ರಿ, ಹಾಸನ ಇಲ್ಲಿ ಕರೆಯಲಾಗಿದ್ದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯನ್ನು ಕಾರಣಾಂತರಗಳಿಂದ ದಿನಾಂಕ: 20-11-2012ರಂದು ಮಂಗಳವಾರ ಮದ್ಯಾಹ್ನ: 2-30ಗಂಟೆಗೆ ಕರೆಯಲಾಗಿದೆ. ಆದ್ದರಿಂದ ಸದರಿ ಸಭೆಗೆ ಸಮಿತಿ ಸದಸ್ಯರುಗಳು ಸಕಾಲಕ್ಕೆ ಹಾಜರಾಗಬೇಕೆಂದು ಕೋರಿದೆ.

ಉಪ ಕಾರ್ಯದರ್ಶಿ(ಆಡಳಿತ),
ಹಾಗೂ ಸದಸ್ಯ ಕಾರ್ಯದರ್ಶಿ,
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತ್ರಿ, ಹಾಸನ.

ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು;

### ಅಧ್ಯಕ್ಷರ ಅಪ್ಪಣೆ ಮೇರೆಗೆ ವಿಷಯಗಳು

ಪ್ರತಿಯನ್ನು:

1. ಶ್ರೀ ಎಂ.ಕೆ.ದೇವಪ್ಪ ಮಲ್ಲಿಗೆವಾಳು, ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
2. ಶ್ರೀಮತಿ ಜ್ಯೋತಿ ಗುರುದೇವ, ಸದಸ್ಯರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
3. ಶ್ರೀಮತಿ ಎಸ್.ಎಲ್.ನಾಗಮಣಿ, ಸದಸ್ಯರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
4. ಶ್ರೀಮತಿ ಪಾರ್ವತಮ್ಮ, ಸದಸ್ಯರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
5. ಶ್ರೀಮತಿ ಮಂಜುಳಬೈರಾಜು, ಸದಸ್ಯರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ